ದಿನಾಂಕ 12.06.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ 1 ಮತ್ತು 6 ನೇ ಪ್ರತಿವಾದಿ ಪರ ಶ್ರೀ. ಎ.ಎಸ್.ಕೆ ವಕೀಲರಿಂದಃ

7. ನಿಪಿ3 ನ್ನು ನಿಮ್ಮ ತಾಯಿಯ ಹೆಸರಿಗೆ ಬರೆದುಕೊಡುವಾಗ ಹಾಜರುಪಡಿಸಿದ ನಿಮ್ಮ ಜಿ.ಪಿ.ಎ ಬಗ್ಗೆ ನಿಮಗೆ ಗೊತ್ತಿದೆಯಾ ಎಂದರೆ ಹೌದು. ಸಾಕ್ಷಿಗೆ ಸದರಿ ಜಿ.ಪಿ.ಎ ನ್ನು ತೋರಿಸಲಾಗಿ ಸಾಕ್ಷಿ ಸದರಿ ಜಿ.ಪಿ.ಎ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ–11 ಎಂದು ಗುರುತಿಸಲಾಯಿತು. ನಿಡಿ–11 ನ್ನು ನೀವು ಭಾರತದಿಂದ ಯಾವಾಗ ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿ ಅಟೆಸ್ಟ್ ಆದ ದಿನಾಂಕದಿಂದ ಒಂದು ವಾರದ ಮುಂಚೆ ಪಡೆದುಕೊಂಡಿದ್ದೇನೆ ಎಂದು ಹೇಳುತ್ತಾರೆ. ರಾಜಿ ಮಾತುಕತೆ ಯಾವಾಗ ಆಗಿತ್ತು ಎಂದರೆ ಸಾಕ್ಷಿ ದಿಃ 11.1.2006 ರಲ್ಲಿ ಆಗಿದೆ ಎಂದು ಹೇಳುತ್ತಾರೆ. ಆ ಮಾತುಕತೆಯಲ್ಲಿ 5 ಮತ್ತು 8 ನೇ ಪ್ರತಿವಾದಿಯರು ಭಾಗಿಯಾಗಿದ್ದರಾ ಎಂದರೆ ಹೌದು. ರಾಜಿ ಮಾತುಕತೆಯಾದ ನಂತರ ನೀವು ಯಾವಾಗ ಭಾರತದಿಂದ ಹೋಗಿದ್ದೀರಿ ಎಂದರೆ ಸಾಕ್ಷಿ ಮರುದಿನ ಅಂದರೆ ದಿಃ 12.1.2006 ರಂದು ಹೋಗಿದ್ದೇನೆ ಎಂದು ಹೇಳುತ್ತಾರೆ. ನನಗೆ ತಿಳಿದಿರುವ ಪ್ರಕಾರ 5 ನೇ ಪ್ರತಿವಾದಿ ಸುಮಾರು 2007 ರವರೆಗೆ ಮುಂಬೈನಲ್ಲಿ ಇದ್ದರು. ಅಲ್ಲಿಯವರೆಗೆ 1 ನೇ ಪ್ರತಿವಾದಿಯ ಜೊತೆ ಯಾರು ಇದ್ದರು ಎಂದರೆ 2006 ರವರೆಗೆ 8 ನೇ ಪ್ರತಿವಾದಿ ಇದ್ದರು, 2007 ರವರೆಗೆ ನನ್ನ ತಾಯಿ ಆರೋಗ್ಯವಾಗಿದ್ದ ಕಾರಣ ಒಬ್ಬರೇ ಇದ್ದರು. ರಾಜಿ ಮಾತುಕತೆಯಾಗುವ ಸಮಯದಲ್ಲಿ 8 ನೇ ಪ್ರತಿವಾದಿ ಎಲ್ಲಿದ್ದರು ಎಂದರೆ ಸಾಕ್ಷಿ ಮಡಂತ್ಯಾರಿನಲ್ಲಿ ವಾಸವಿದ್ದರು ಎಂದು ಹೇಳುತ್ತಾರೆ. ರಾಜಿ ಮಾತುಕತೆಯಾದ ನಂತರ 8 ನೇ ಪ್ರತಿವಾದಿ ಮಂಗಳೂರಿಗೆ ಹೋಗಿದ್ದಾರೆ ಎಂದರೆ ಇಲ್ಲ, ಆದರೆ ಮಾತುಕತೆಯಾದ ಎರಡು ಅಥವಾ ಮೂರನೇ ದಿನಗಳಲ್ಲಿ ಊರಿಗೆ ಬಂದಿರಬಹುದು. 2007 ರವರೆಗೂ 5 ನೇ ಪ್ರತಿವಾದಿ ಮುಂಬೈನಲ್ಲೆ ಇದ್ದರು ಎಂದರೆ ಹೌದು. ರಾಜಿ ಮಾತುಕತೆಯಾದ ನಂತರ ತಕ್ಷಣ 5 ನೇ ಪ್ರತಿವಾದಿ ಮುಂಬೈನಿಂದ ವಾಪಾಸು ಬಂದಿಲ್ಲ ಎಂದರೆ ನನಗೆ ಗೊತ್ತಿಲ್ಲ. ರಾಜಿ ಮಾತುಕತೆಯಾದ ನಂತರ ಎಷ್ಟು ದಿನಗಳ ಕಾಲ 5 ನೇ ಪ್ರತಿವಾದಿ ಮುಂಬೈನಲ್ಲಿ ಇದ್ದರು ಎಂದರೆ ಗೊತ್ತಿಲ್ಲ.

8. ನಿಡಿ11 ನ್ನು Mascath ಗೆ ಕಳುಹಿಸಿದ ಬಗ್ಗೆ Postal cover ಇದೆಯಾ ಎಂದರೆ ಸಾಕ್ಷಿ ನನ್ನ ಹತ್ತಿರ ಇಲ್ಲ ಎಂದು ಹೇಳುತ್ತಾರೆ. ನಿಡಿ11 ನ್ನು ಬರೆದುಕೊಡುವ ಪೂರ್ವದಲ್ಲಿ ಅದರಲ್ಲಿರುವ

ವಿಚಾರಗಳನ್ನು ತಿಳಿದುಕೊಂಡಿದ್ದೀರಾ ಎಂದರೆ ಹೌದು. ನಿಡಿ11 ರ ಪುಟ ಸಂಃ 2 ರ ಕಂಡಿಕೆ 1 ರಲ್ಲಿ ನಮೂದಿಸಿದ ಅಂಶಗಳನ್ನು ನಾನು 8 ನೇ ಪ್ರತಿವಾದಿಗೆ ನೀಡಿದ್ದೇನೆ ಎಂದರೆ ಸರಿ. ನಿಡಿ11 ರಲ್ಲಿ ನಿಮ್ಮ ಹಿಸ್ಸೆಗಳನ್ನು ಪಡೆದುಕೊಂಡ ಬಗ್ಗೆ ಯಾವುದೇ ಅಂಶಗಳು ಇದೆಯಾ ಎಂದರೆ ಇಲ್ಲ. ಸಾಕ್ಷಿ ಮುಂದುವರಿದು ನನಗೆ ನಿಡಿ11 ಹಾಗೂ ಅದರ ಜೊತೆ ನನ್ನ ಹಿಸ್ಸೆಯನ್ನು ಪಡೆದುಕೊಳ್ಳುವ affidavit ನ್ನು ಒಟ್ಟಿಗೆ ಕಳುಹಿಸಿದ್ದಾರೆ ಮತ್ತು ಅದನ್ನು ಅಟೆಸ್ಟ್ ಸಹ ಮಾಡಿರುತ್ತಾರೆ, ಆ ಎರಡು ದಾಖಲೆಗೆ Indian embassy ಯಿಂದ ಒಂದೇ ಬಿಲ್ ಆಗಿರುತ್ತದೆ. ನಿಡಿ10 ರಲ್ಲಿ ನಮೂದಿಸಿರುವ ಸಾಲವನ್ನು ಪಡೆದುಕೊಂಡಿರುವುದಾಗಿ 8 ನೇ ಪ್ರತಿವಾದಿ ನನಗೆ ಹೇಳಿರುತ್ತಾರೆ, ಆದರೆ ನಿಡಿ10 ರ ಮೇಲೆ ಪಡೆದುಕೊಂಡಿರುವುದಿಲ್ಲ, ಆದರೆ ಪ್ರತ್ಯೇಕವಾದ ಎರಡು ಗ್ಯಾರೆಂಟರ್ ಆಧಾರದ ಮೇಲೆ ಪಡೆದುಕೊಂಡಿರುತ್ತಾರೆ. ಯಾವಾಗ ಸಾಲವನ್ನು ಮರುಪಾವತಿ ಮಾಡಿದ್ದಾರೆ ಗೊತ್ತಾ ಎಂದರೆ ಸಾಕ್ಷಿ 2008 ರಲ್ಲಿ ಮರುಪಾವತಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಯಾರು ಹೇಳಿದ್ದು ಎಂದರೆ ಸಾಕ್ಷಿ 8 ನೇ ಪ್ರತಿವಾದಿ ತಿಳಿಸಿದ್ದಾರೆ ಎಂದು ಹೇಳುತ್ತಾರೆ. ಆ ಸಮಯದಲ್ಲಿ ನನ್ನ ತಂದೆಯವರು ಮೃತಪಟ್ಟಿದ್ದರು. ಸಾಲವನ್ನು ನಿರಂತರವಾಗಿ ಮರುಪಾವತಿ ಮಾಡಿದ್ದಾರಾ ಅಥವಾ ಸುಸ್ಥಿಯಾದ ನಂತರ ಪಾವತಿ ಮಾಡಿದ್ದಾರಾ ಎಂದರೆ ಸಾಕ್ಷಿ ಸಾಲವನ್ನು ನಿರಂತರವಾಗಿ ಪಾವತಿಸಿದ್ದಾರೆ, ಪಾವತಿ ಮಾಡುವಲ್ಲಿ 2007 ರಲ್ಲಿ ವಿಳಂಬವು ಸಹ ಆಗಿರುತ್ತದೆ ಎಂದು ಹೇಳುತ್ತಾರೆ. ಯಾರ ಹೆಸರಿನಲ್ಲಿ ಸಾಲವನ್ನು ಪಡೆದಿದ್ದಾರೆ ಎಂದರೆ ಸಾಕ್ಷಿ ನನ್ನ ತಂದೆ ಹಾಗೂ 8 ನೇ ಪ್ರತಿವಾದಿಯ ಹೆಸರಿನಲ್ಲಿ ಜಂಟಿಯಾಗಿ ಪಡೆದಿದ್ದಾರೆ ಎಂದು ಹೇಳುತ್ತಾರೆ. ಆ ಸಾಲವನ್ನು ಮರುಪಾವತಿ ಮಾಡಲು ನೀವು ಹಣ ಕೊಟ್ಟಿದ್ದೀರಾ ಎಂದರೆ ಇಲ್ಲ. 8 ನೇ ಪ್ರತಿವಾದಿ ಸಾಲವನ್ನು ಪಡೆದುಕೊಂಡಿದ್ದು, ತಂದೆಯ ಹೆಸರಿನಲ್ಲಿ ದಾಖಲೆ ಇದ್ದ ಕಾರಣ ಜಂಟಿಯಾಗಿ ಸಾಲ ಪಡೆದುಕೊಂಡಿದ್ದಾರೆ ಎಂದು ತೋರಿಸಿದ್ದಾರೆ ಎಂದರೆ ಸರಿ, ಆದರೆ ಸದರಿ ಸಾಲವನ್ನು ಮನೆ ಕಟ್ಟಲು ಪಡೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. ಅಲ್ಲದೆ ಬ್ಯಾಂಕು ಮನೆಯ Construction progress ಆಧಾರದ ಮೇಲೆ ಸಾಲ ಬಿಡುಗಡೆ ಮಾಡಿದೆ ಎಂದು ಹೇಳುತ್ತಾರೆ. ಸಾಲವನ್ನು ಪಡೆದುಕೊಂಡ ನಂತರ 8 ನೇ ಪ್ರತಿವಾದಿ ಸಾಲವನ್ನು ಮರುಪಾವತಿ ಮಾಡದ ಕಾರಣ ದೊಡ್ಡ ಮಟ್ಟದ ಸಾಲ ಸುಸ್ತಿಯಾಗಿ ಮರುಪಾವತಿಯಾಗಿದೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. 8 ನೇ ಪ್ರತಿವಾದಿ ಸಾಲವನ್ನು ಮರುಪಾವತಿ ಮಾಡದ ಕಾರಣ ಬ್ಯಾಂಕಿನವರು ಸಾಲವನ್ನು ಮರುಪಾವತಿ ಮಾಡಲು ವ್ಯವಹರಣೆಯನ್ನು ಸಹ ಮಾಡಿದ್ದರು ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆನಂತರದಲ್ಲಿ 5 ನೇ ಪ್ರತಿವಾದಿ ಬ್ಯಾಂಕಿನವರ ಹತ್ತಿರ ಒಂದೇ ಮೊತ್ತದಲ್ಲಿ ಸಾಲ ಮರುಪಾವತಿ ಮಾಡಲು ಮಾತನಾಡಿದ್ದರು ಎಂದರೆ ಸಾಕ್ಷಿ ನನಗೆ ತಿಳಿದಿರುವ ಪ್ರಕಾರ

ಅದು ಸರಿಯಲ್ಲ, 8 ನೇ ಪ್ರತಿವಾದಿ ಸಾಲವನ್ನು ಮರುಪಾವತಿ ಮಾಡಿದ್ದಾರೆ ಎಂದು ಹೇಳುತ್ತಾರೆ. 8 ನೇ ಪ್ರತಿವಾದಿ ಆಧಾಯದ ತೆರಿಗೆಯನ್ನು ಸಹ ಪಾವತಿ ಮಾಡುತ್ತಿದ್ದರು. 8 ನೇ ಪ್ರತಿವಾದಿ ಅದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳು ನನ್ನ ಹತ್ತಿರ ಇದೆ, ಅವಶ್ಯಕತೆ ಇದ್ದರೆ ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ಬ್ಯಾಂಕಿನವರು 1 ನೇ ಪ್ರತಿವಾದಿಗೆ ಸಾಲ ಮರುಪಾವತಿಗೆ ಸಂಬಂಧಪಟ್ಟಂತೆ ನೋಟೀಸ್ ನೀಡಲು ಪ್ರಾರಂಭ ಮಾಡಿದ್ದರಿಂದ ತಾಯಿಯ ಮೇಲಿನ ಪ್ರೀತಿಯಿಂದ 5 ನೇ ಪ್ರತಿವಾದಿ ಸಾಲವನ್ನು ಮರುಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ, ಮಾಡಿದ್ದರೆ ದಾಖಲೆಗಳನ್ನು ಹಾಜರುಪಡಿಸಬಹುದು. 5 ನೇ ಪ್ರತಿವಾದಿ ಬ್ಯಾಂಕಿನವರ ಜೊತೆ ಮಾತನಾಡಿದ ಕಾರಣ ಬ್ಯಾಂಕಿನವರು 7 ಲಕ್ಷದ ಏಕಗಂಟಿನ ಪಾವತಿಗೆ ಸಾಲವನ್ನು ಮುಕ್ತಾಯಗೊಳಿಸಲು ಒಪ್ಪಿದ್ದರು ಎಂದರೆ ಸರಿಯಲ್ಲ, 8 ನೇ ಪ್ರತಿವಾದಿ 7 ಲಕ್ಷವನ್ನು ಪಾವತಿ ಮಾಡಿ ಸಾಲ ತೀರಿಸಿದ್ದಾರೆ ಎಂದು ಹೇಳುತ್ತಾರೆ. 5 ನೇ ಪ್ರತಿವಾದಿ 8 ನೇ ಪ್ರತಿವಾದಿಗೆ ಏಕಗಂಟಿನಲ್ಲಿ ಸಾಲ ಪಾವತಿ ಮಾಡುವಂತೆ ಕೇಳಿದಾಗ 8 ನೇ ಪ್ರತಿವಾದಿ ಅದು ನನ್ನಿಂದ ಸಾಧ್ಯವಿಲ್ಲ ಎಂದು ನಿರಾಕರಿಸಿದ್ದರು ಎಂದು ಅನುಭವ ಕೊಡುತ್ತಾರೆ ಎಂದರೆ ಸರಿಯಲ್ಲ. ಆನಂತರ 5 ನೇ ಪ್ರತಿವಾದಿ ತನ್ನ ಸ್ವಂತ ಸಂಪಾದನೆಯಿಂದ 7 ಲಕ್ಷ ಸಾಲವನ್ನು ಏಕಗಂಟಿನಲ್ಲಿ ಬ್ಯಾಂಕಿಗೆ ಪಾವತಿ ಮಾಡಿ ಸಾಲ ತೀರಿಸಿದ್ದಾರೆ ಎಂದರೆ ಸರಿಯಲ್ಲ, ದಾಖಲೆ ಇದ್ದರೆ ಹಾಜರುಪಡಿಸಬಹುದು.

9. 1 ನೇ ಪ್ರತಿವಾದಿಯ ಎಲ್ಲಾ ಮಕ್ಕಳು ಸೇರಿ 2006 ರಲ್ಲಿ ಎಲ್ಲಾ ಆಸ್ತಿಗಳಲ್ಲಿ ಅವರಿಗಿದ್ದ ಹಕ್ಕುಗಳನ್ನು ತಾಯಿಯ ಪರವಾಗಿ ಯಾವುದೇ ಷರತ್ತು ಇಲ್ಲದೆ ಹಕ್ಕು ಖುಲಾಸೆ ಮಾಡಿಕೊಡುತ್ತೇವೆ ಎಂದು ಒಪ್ಪಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ನನ್ನ ಜಿ.ಪಿ.ಎ ಜೊತೆಯಲ್ಲಿ ಅಫಿಡವಿಟ್ ನ್ನು ಸಹ ನನ್ನ ಹಿಸ್ಸೆಯನ್ನು ಕೊಡುವಂತೆ ಕೇಳಿದ್ದೆ ಎಂದು ಹೇಳುತ್ತಾರೆ. ಉಳಿದವರು ಜಿ.ಪಿ.ಎ ನೀಡಿದ್ದಾರೋ ಇಲ್ಲವೋ ಗೊತ್ತಿಲ್ಲ ಎಂದು ಹೇಳುತ್ತಾರೆ. ಆ ಖುಲಾಸೆ ಪತ್ರವನ್ನು ಬರೆದುಕೊಡುವ ಸಂದರ್ಭದಲ್ಲಿ ಉಪನೊಂದಾವಣಾಧಿಕಾರಿಯವರ ಕಚೇರಿಯ ಮುಂದೆ ಹಾಜರಾಗಲು ಸಾಧ್ಯವಾಗದವರು 8 ನೇ ಪ್ರತಿವಾದಿಗೆ ಜಿ.ಪಿ.ಎ ನ್ನು ಬರೆದುಕೊಡುವುದಾಗಿ ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆ ಮಾತುಕತೆಯಲ್ಲಿ ಜಿ.ಪಿ.ಎ ಮೂಲಕ ಸ್ವತ್ತನ್ನು ವರ್ಗಾವಣೆ ಮಾಡುವ ಬಗ್ಗೆ ಯಾವುದೇ ನಿರ್ಣಯ ಆಗಿಲ್ಲ ಎಂದು ಹೇಳುತ್ತಾರೆ. ಅದರಂತೆ 8 ನೇ ಪ್ರತಿವಾದಿ ಜಿ.ಪಿ.ಎ ನ್ನು ತಯಾರಿಸಿ ನನಗೆ ಮತ್ತು ಉಳಿದವರಿಗೆ ಕಳುಹಿಸಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಜಿ.ಪಿ.ಎ ಮತ್ತು ಅಫಿಡವಿಟ್ ನ್ನು 5 ನೇ ಪ್ರತಿವಾದಿಯಿಂದ ಬಂದಿದೆ ಎಂದು

ಹೇಳುತ್ತಾರೆ. 8 ನೇ ಪ್ರತಿವಾದಿ ಕಳುಹಿಸಿದ್ದರೂ ಸಹ ಆ ವಿಚಾರವನ್ನು ಮುಚ್ಚಿಡಲು ಉದ್ದೇಶ ಪೂರ್ವಕವಾಗಿ ನಿಡಿ11 ನ್ನು ಕಳುಹಿಸಲಾಗಿದ್ದ ಪೋಸ್ಟಲ್ ಕವರ್ ನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ3 ನ್ನು 2008 ರಲ್ಲಿ ತಯಾರಿಸಿದ್ದು, ಅದರಲ್ಲಿರುವ ಎಲ್ಲಾ ಅಂಶಗಳನ್ನು ನೊಂದಾವಣೆಯಾಗುವ ಪೂರ್ವದಲ್ಲಿ ನಾನು ತಿಳಿದುಕೊಂಡಿದ್ದೆ ಮತ್ತು ಒಪ್ಪಿಗೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಿಪಿ3 ರ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ಹೇಳುತ್ತಾರೆ. ನನಗೆ, ವಾದಿಗೆ ಮತ್ತು 8 ನೇ ಪ್ರತಿವಾದಿಗೆ ದಾವಾ ಸ್ವತ್ತನಲ್ಲಿ ಯಾವುದೇ ಹಕ್ಕು ಇಲ್ಲದೇ ಇದ್ದರೂ ಅದರ ಅಂಶಗಳನ್ನು ಪಡೆದುಕೊಳ್ಳುವ ಉದ್ದೇಶದಿಂದ ಕುತಂತ್ರ ಮಾಡಿ ಈ ದಾವೆ ಹೂಡಿ ಸುಳ್ಳು ಸಾದನೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನಿಪಿ3 ರಲ್ಲಿರುವ ಅಂಶಗಳನ್ನು ಎಲ್ಲರೂ ಸಹ ಒಪ್ಪಿದ ಕಾರಣ 2017 ರವರೆಗೂ ಅದನ್ನು ನಾವು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಈಗಲೂ ಸಹ ನನ್ನ ಜಿ.ಪಿ.ಎ ನ್ನು ವಾಪಾಸು ಪಡೆಯುತ್ತೇನೆ ಎಂದು ಹೇಳುತ್ತಾರೆ. ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ದಾಖಲೆಗೆ ಪೂರಕವಾಗಿ ಸುಳ್ಳು ಸಾದನೆ ಮಾಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. 5 ನೇ ಪ್ರತಿವಾದಿ ಬಲವಂತವಾಗಿ ಸ್ವಾಧೀನ ಪಡೆದಿದ್ದಾರೆ ಎಂದು ತಿಳಿಸಿದ್ದು, ಈ ಸಂಬಂಧ ಯಾವುದಾದರೂ ದೂರನ್ನು ದಾಖಲಿಸಿದ್ದೀರಾ ಎಂದರೆ ಇಲ್ಲ. ಸಾಕ್ಷಿ ಮುಂದುವರಿದು ನನ್ನ ಕುಟುಂಬದ ಘನತೆಗೋಸ್ಕರ ಹಾಗೂ ಸ್ಥಳೀಯ ಗೌರವದಿಂದ ಅಲ್ಲದೆ ಅಲ್ಪಕಾಲಕ್ಕೆ ಭಾರತಕ್ಕೆ ಬರುವುದರಿಂದ ನಾನು ಯಾವುದೇ ದೂರನ್ನು ದಾಖಲಿಸಿರುವುದಿಲ್ಲ ಎಂದು ಹೇಳುತ್ತಾರೆ. 5 ನೇ ಪ್ರತಿವಾದಿ ಬಲವಂತವಾಗಿ ಸ್ವಾಧೀನ ಪಡೆದಿದ್ದಾರೆ ಎಂದು ನಿಮಗೆ ಯಾವಾಗ ಗೊತ್ತಾಗಿದೆ ಎಂದರೆ ಸಾಕ್ಷಿ ನನ್ನ ಜಿ.ಪಿ.ಎ ನ್ನು ಪಡೆದ ನಂತರ 2008 ರಲ್ಲಿ ಎಂದು ಹೇಳುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
(ಸಾ.ಓ.ಹೇ.ಕೇ.ಸ.ಇ.ಎ.ಒ) ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ